**Ex.2/2018 P.W.2**

ದಿನಾಂಕಃ **31.08.2021** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ **JDR** ಪರ ಮಾನ್ಯ ಶ್ರೀ **MC** ವಕೀಲರಿಂದಃ</u>

ನಾನು ತಮ್ಮಣಿಯಲ್ಲಿ ಮನೆ ಮಾಡಿಕೊಂಡು ವಾಸವಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ನ ರಾ ಪುರದಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಿರಿಗಳಲೆ ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನು dhr ರವರ ಜಮೀನಿನ ಅಕ್ಕಪಕ್ಕ ಬರುತ್ತದ ಎಂದರೆ ಸರಿ. ನನ್ನ ಜಮೀನಿನಲ್ಲಿ ರಬ್ಬರ್ ಹಾಗೂ ಅಡಿಕೆ ಬೆಳೆಯನ್ನು ಹಾಕಿರುತ್ತೇನೆ. ಸದರಿ ಬೆಳೆಗೆ dhr ರವರ ಬೋರ್ ವೆಲ್ ನಿಂದ ನೀರನ್ನು ಪಡೆಯುತ್ತಿದ್ದೇನೆಂದರೆ ಸರಿ. ಆದಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನೀರಾವರಿ ಸೌಲಭ್ಯ ಇರುವುದಿಲ್ಲ, Dhr ರವರ ಬೋರ್ ವೆಲ್ ನಿಂದ ನೀರನ್ನು ಪಡೆಯುತ್ತಿರುವುದರಿಂದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ನನ್ನ ಜಮೀನಿನಲ್ಲಿ ಬೋರ್ ವೆಲ್ ತೆಗೆದು ಒಂದು ವರ್ಷ ಆಗಿರುತ್ತದೆ. ನಾನು ಈಗ ಬಾವಿಹಟ್ಟಿಯ 3 ವಾರ್ಡ್ ನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ.

ನನಗೆ Dhr ರವರು 30 ವರ್ಷಗಳಿಂದ ಪರಿಚಯ ಇರುತ್ತಾರೆ. Dhr ರವರ ತಂದೆಗೆ ಎಷ್ಟು ಜನ ಮಕ್ಕಳು ಹಾಗೂ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು Dhr ರವರಿಗೆ ಅವರ ತಾಯಿ ನೀಡಿರುತ್ತಾರೆ. ಈ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ.

ದಾವಾ ಆಸ್ತಿಯಲ್ಲಿ Dhr ಹಾಗೂ ಅವರ ತಂದೆ ಹಾಗೂ ಅವರ ಎಲ್ಲಾ 7 ಜನ ಸಹೋದರ ಸಹೋದರಿಯಾರಿಗೂ ಸೇರಿದ ಆಸ್ತಿ ಎಂದರೆ ನನಗೆ ಮಾಹಿತಿ ಇಲ್ಲ. Dhr ರವರು ದಾವೆಯನ್ನು ಅವರ ತಾಯಿ ಮತ್ತು ತಮ್ಮನ ವಿರುದ್ದ ಹೂಡಿದ್ದರು. ಈ ಬಗ್ಗೆ ನನಗೆ ಗೊತ್ತಿತ್ತು. Dhr ರವರು ದಾವೆಯನ್ನು 2002 ರಲ್ಲಿ ಹೂಡಿರುತ್ತಾರೆ. ಆ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

Jdr ರವರು ಕಟ್ಟಿಕೊಂಡಿರುವ ಮನೆ Dhr ರವರ ಆಸ್ತಿಯ ಹೊರಗಡೆ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಮೇದರ ಬೀದಿ ಹಿಂಭಾಗದಲ್ಲಿ ಬರುವ ಮನೆಗಳು ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಬರುತ್ತದೆ ಎಂದರೆ ಗೊತ್ತಿಲ್ಲ.

2016-17 ಸಾಲಿನಲ್ಲಿ Jdr ರವರು ಮನೆ ಕಟ್ಟುವ ವಿಚಾರಕ್ಕೆ ಸಂಬಂಧಪಟ್ಟಂತೆ set back ಬಿಟ್ಟಿರುವುದಿಲ್ಲ ಎಂದು Dhr ರವರು ಪಟ್ಟಣ ಪಂಚಾಯಿತಿಗೆ ದೂರನ್ನು ನೀಡಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸರಿಯಾಗಿ ಕಣ್ಣು ಕಾಣದ ಕಾರಣ ನಿಪಿ55 ರಲ್ಲಿ ಕಾಣುವ ಮನೆ ಯಾರ ಮನೆ ಎಂದು ನನಗೆ ಹೇಳಲು ಆಗುವುದಿಲ್ಲ.

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಆದಕಾರಣ ನನಗೆ ನನ್ನ ಪ್ರಮಾಣಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. Dhr ರವರು ಮನೆಯನ್ನು ಸುಮಾರು 35 ವರ್ಷಗಳಿಗಿಂತಲೂ ಮುಂಚೆ ಕಟ್ಟಿರುತ್ತಾರೆ. ನನಗೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ Dhr ರವರು ನನಗೆ ನೀರನ್ನು ನೀಡುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ನಮೂದಾಗಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಸುಳ್ಳುಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.